# ಒಂದೇ ಎಚ್ಚರಿಕೆ ಸಾಕು

• ಸುನಯನ ವಾಲ್ಟರ್ಸ್

ಗಾಳಿಯನ್ನು ಆಳವಾಗಿ ಮೂಸಿ ನೋಡುತ್ತಾ ಜೇನ್ ಗಂಡನನ್ನು ಪ್ರಶ್ನಿಸಿದಳು – "ವಿಚಿತ್ರವಾದ ಈ ವಾಸನೆಯು ಏನಿರಬಹುದು?"

ಅವನಿಗೂ ಈ ವಾಸನೆಯ ಅರಿವಿತ್ತು. ಬಹಳ ಚಳಿ ಇದ್ದುದರಿಂದ, ಅಗ್ಗಿಷ್ಟಿಕೆಗೆ ಇನ್ನಷ್ಟು ಕಟ್ಟಿಗೆ ಸೇರಿಸಲು ಅವನು ಕೆಳಗೆ ಇಳಿದು ನೆಲಮನೆಯತ್ತ ಹೋದನು. ಇತ್ತ ಜೇನ್ ಅವರ ಪುಟ್ಟ ಮಗುವನ್ನು ನಿದ್ರಿಸಲು ಉದ್ಯುಕ್ತಳಾಗಿದ್ದಳು.

ತಾಪ ಮಾಪಕ (Thermometer) ನೋಡಿದ ಜೋರ್ಜ್ ಅಂದುಕೊಂಡನು – "ಎಂಭತ್ತೆರಡು ಡಿಗ್ರಿ! ನಾನು ಅಷ್ಟೊಂದು ಕಟ್ಟಿಗೆ ಹಾಕಿರಲಿಲ್ಲವಾದರೂ ತಾಪಮಾನ ಇಷ್ಟೊಂದು ಹೇಗೇ?" ಬದಿಯ ಗೋಡೆಯನ್ನು ಮುಟ್ಟಿ ನೋಡಿದರೆ ಅದೂ ವಿಪರೀತ ಬಿಸಿ ಇದೆ ಎನ್ನಿಸಿತು. ಅವನ ಮನಸ್ಸು ಈ ತಾಪಮಾನ ಮತ್ತು ಆ ವಿಶಿಷ್ಟ ವಾಸನೆಯನ್ನು ಜೋಡಿಸಿತು.

ಮೇಲೆ ತ್ವರಿತವಾಗಿ ಹೋಗಿ ಹೊಗೆ ಕೊಳವೆಯನ್ನು ಮುಟ್ಟಿ ನೋಡಿದರೆ ಅದು ಇನ್ನೂ ಹೆಚ್ಚು ಬಿಸಿಯಾಗಿತ್ತು! ಗೋಡೆಯ ಮೂಲೆಯ ಭಾಗ ಮತ್ತು ಮೇಲಿನ ತಾರಸಿಯು ಕರಿಯ ಬಣ್ಣಕ್ಕೆ ತಿರುಗಲಾರಂಭಿಸಿತ್ತು! ಎಷ್ಟೊಂದು ಭಯಾನಕ!

ಜೋರ್ಜ್ ಕೂಡಲೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಿದನು. ನಿಮಿಷದೊಳಗೆ ಅಗ್ನಿಶಾಮಕ ವಾಹನವು ಎಲ್ಲಾ ಸಲಕರಣೆಗಳೊಂದಿಗೆ ಹಾಜರಾಯಿತು. ಜೇನ್ ಮತ್ತು ಜೋರ್ಜ್ ಮಗುವನ್ನು ಬೆಚ್ಚನೆಯ ಬಟ್ಟೆಯಲ್ಲಿ ಸುತ್ತಿ ತಾವೂ ಚಳಿಗಾಲದ ಉಡುಪುಗಳನ್ನು ಧರಿಸಿಕೊಂಡರು.

ಏಣಿಯ ಮೇಲೆ ಹತ್ತಿದ ಅಗ್ನಿಶಾಮಕದಳದ ಸಿಬ್ಬಂದಿಯೊಬ್ಬನು ಕೂಗಿಕೊಂಡನು – "ಕೂಡಲೇ ಹೊರಗೆ ಹೋಗಿರಿ! ಹೊಗೆ ಕೊಳವೆಯೊಳಗೆ ಬೆಂಕಿ ಕಾಣಿಸಿ, ಮೇಲಿನ ಅಟ್ಟಕ್ಕೆ ಆಗಲೇ ಉರಿ ಹತ್ತಿಕೊಂಡಿದೆ.!"

ದಂಪತಿಗಳು ಕೂಡಲೇ ಮಗುವನ್ನು ಹಿಡಿದುಕೊಂಡು ಹೊರ ನಡೆದರು. ಅವರಿಗೆ ಇನ್ನೊಂದು ಎಚ್ಚರಿಕೆಯ ಅಗತ್ಯವಿರಲಿಲ್ಲ.

ದೇವರ ನ್ಯಾಯನಿರ್ಣಾಯದ ಬೆಂಕಿಯ ಕುರಿತು ನಿಮಗೆ ಎಷ್ಟು ಬಾರಿ ಹೇಳಲ್ಪಟ್ಟಿದೆ?– ಯಾವುದೇ ಮನೆಯ ಬೆಂಕಿಗಿಂತ ತೀವ್ರವಾಗಿದ್ದು, ಎಂದಿಗೂ ಆರದ ಬೆಂಕಿ! ಆ ನಿತ್ಯ ಬೆಂಕಿಯನ್ನು ತಪ್ಪಿಸಿಕೊಳ್ಳಲು ಒಂದೇ ಮಾರ್ಗವಿದೆ – ನೀನು ಪಾಪಿ ಎಂದು ಯೇಸು ಸ್ವಾಮಿಯ ಮುಂದೆ ಒಪ್ಪಿಕೊಳ್ಳುವುದು. ಆತನು ನಿನ್ನನ್ನು ಪ್ರೀತಿಸುತ್ತಾನೆ ಮತ್ತು ನಿನ್ನ ಪಾಪಗಳನ್ನು ಕ್ಷಮಿಸಲು ಉತ್ಸುಕನಾಗಿದ್ದಾನೆ. ಆತನು ಕ್ರೂಜೆಯ ಮೇಲೆ ಪ್ರಾಣವನ್ನರ್ಪಿಸಿ, ನಮಗೆ ಬಿಡುಗಡೆಯನ್ನುಂಟು ಮಾಡಿದನು. ಉಚಿತವಾದ ಆತನ ಪಾಪಕ್ಷಮೆಯನ್ನು ಸ್ವೀಕರಿಸಿ, ಆತನನ್ನು ನಂಬಿದರೆ, ನಮಗೆ ಬೆಂಕಿಯ ಭಯವಿಲ್ಲ.

ಮನೆಗೆ ಅಪಾಯವಾಗುವ ಮೊದಲೇ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸಿದರು. ಜೋರ್ಜ್ ಮತ್ತು ಜೇನ್ ಅಗ್ನಿಶಾಮಕ ದಳದವರ ಎಚ್ಚರಿಕೆಗಾಗಿ ಕೃತಜ್ಞತೆಗಳನ್ನರ್ಪಿಸಿದರು. ನೀವು ದೇವರ ನ್ಯಾಯತೀರ್ಪಿನ "ಎಚ್ಚರಿಕೆ"ಯನ್ನು ಕೇಳಿ, ಆತನ ಮಗನಾದ ಯೇಸುಕ್ರಿಸ್ತನ ಕಾರ್ಯದಿಂದುಂಟಾದ ಪಾಪಕ್ಷಮೆಯನ್ನು ಸ್ವೀಕರಿಸುವಿರಾ?

❖❖❖

**18ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು**

**ಸ್ಟೆಫಿನ್**

**07–08–1992**



ತಂದೆ : ರಮೇಶ್ ನಾಗುರಕರ್ ಜೀದರ್

**ಶುಭಾಶಯ ಕೋರುವವರು :**

ತಾಯಿ, ತಂದೆ, ತಮ್ಮಂದಿರು, ತಂಗಿಯರು, ಅಜ್ಜಿ ಬಂಧುಬಳಗ ಮತ್ತು ಬಾಬುರಾವ್, ಗದಗಿ.

('ತುತ್ತುಗಳು' ಪ್ರತಿನಿಧಿ)